## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 378(339)**
**ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸುವ ದಿನಾಂಕ : 12.12.2018**
**ಉತ್ತರಿಸುವ ಸಚಿವರು : ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು**

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಲವಾರು ವರ್ಷಗಳಿಂದ ನೆನೆಗುದಿಯಲ್ಲಿರುವ ಭೂಸ್ವಾಧೀನ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ಅನುಬಂಧದಲ್ಲಿ ಮಾಹಿತಿ ಒದಗಿಸಿದೆ. |
| ಆ) | ಭೂಸ್ವಾದೀನ ಮಾಡಿಕೊಂಡು ಹಲವಾರು ವರ್ಷಗಳು ಕಳೆದರೂ ಸಹ ಭೂಪರಿಹಾರ ಕೊಡದೆ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ; ಯಾವ ಕ್ರಮ ಕೈಗೊಳ್ಳಲಾಗಿದೆ; | ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ, ಹೆಚ್ಚುವರಿ ಪರಿಹಾರ ಪ್ರಶ್ನಿಸಿ ಮಾನ್ಯ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳು, ದರಖಾಸ್ತು ಮಂಜೂರಾತಿ ಪ್ರಕರಣಗಳು ಹಾಗೂ ಸಿವಿಲ್ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳನ್ನು ಹೊರತುಪಡಿಸಿ, ಉಳಿದ ಪ್ರಕರಣಗಳಿಗೆ ಪರಿಹಾರವನ್ನು ವಿತರಿಸಲಾಗುತ್ತಿದೆ. |
| ಇ) | ಭೂಸ್ವಾಧೀನ ಮಾಡಿಕೊಂಡ ನಂತರ ನ್ಯಾಯಾಲಯದಿಂದ ಆದೇಶ ಬಂದರೂ ಪರಿಹಾರ ಕೊಡದೇ ವಿಳಂಬ ಮಾಡಲು ಕಾರಣಗಳೇನು; ವಿಳಂಬಕ್ಕೆ ಕಾರಣರಾದವರ ಮೇಲೆ ಕ್ರಮ ಜರುಗಿಸಲಾಗಿದೆಯೇ; (ವಿವರ ನೀಡುವುದು). | ಮಾನ್ಯ ನ್ಯಾಯಾಲಯವು ಹೆಚ್ಚುವರಿ ಪರಿಹಾರ ಸೂಚಿಸಿರುವ ಪ್ರಕರಣ ಕುರಿತಂತೆ ಕಾನೂನು ಅಭಿಪ್ರಾಯ ಕೋರಿರುವ ಪ್ರಕರಣಗಳು/ಉಚ್ಚ ನ್ಯಾಯಾಲಯದ ಮೇಲ್ಮನವಿ ಪ್ರಕರಣಗಳು ಹಾಗೂ ಭೂಕೋರಿಕಾ ಸಂಸ್ಥೆಗೆ ಹೆಚ್ಚುವರಿ ಭೂ ಪರಿಹಾರ ಕೋರಿರುವ ಪ್ರಕರಣಗಳನ್ನು ಹೊರತುಪಡಿಸಿ, ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲ.<br><br>ಭೂ ಕೋರಿಕಾ ಸಂಸ್ಥೆಗಳು ಹೆಚ್ಚುವರಿ ಪರಿಹಾರದ ಮೊತ್ತವನ್ನು ನಿಗಧಿತ ಅವಧಿಯಲ್ಲಿ ಠೇವಣಿ ಮಾಡಲು ವಿಳಂಬ ಮಾಡುತ್ತಿರುವುದರಿಂದ ಪರಿಹಾರ ಪಾವತಿಸಲು ವಿಳಂಬವಾಗುತ್ತಿದೆ. |
| ಈ) | ಸರ್ಕಾರದ ನೀತಿಯಂತೆ ನಿಗದಿತ ಸಮಯದೊಳಗೆ ಭೂಸ್ವಾದೀನಪಡಿಸಿದ ಜಾಗದಲ್ಲಿ ಅಭಿವೃದ್ಧಿ ಮಾಡದೇ ಇರುವುದರಿಂದ ಭೂಸ್ವಾದೀನ ಪ್ರಕ್ರಿಯೆಯಿಂದ ಕೈಬಿಡುವ ಬಗ್ಗೆ ಸರ್ಕಾರದ ನಿಲುವೇನು; | ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರನ್ವಯ ಕ್ರಮವಹಿಸಲಾಗುತ್ತಿದೆ. |
| ಉ) | ಭೂಸ್ವಾಧೀನ ಪಡಿಸಿಕೊಂಡು ಈವರೆವಿಗೂ ಪರಿಹಾರ ಧನ ನೀಡದಿರುವ ಭೂಮಿಗಳಿಗೆ ಇಂದಿನ ಮಾರುಕಟ್ಟೆ ದರ ನಿಗದಿಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ? | ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013ರನ್ವಯ ಭೂಸ್ವಾಧೀನಪಡಿಸಲಾದ ಪ್ರಕರಣಗಳಿಗೆ ಕಾಯ್ದೆಯಲ್ಲಿ ಕಲ್ಪಿಸಿರುವ ಅವಕಾಶದಂತೆ ಪರಿಹಾರವನ್ನು ಪಾವತಿಸಲಾಗುವುದು. |

**ಕಂಇ 146 ಭೂಸ್ವಾಬಿ 2018**

**(ಆರ್.ವಿ. ದೇಶಪಾಂಡೆ)**
ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

# ಅನುಬಂಧ

ರಾಜ್ಯದಲ್ಲಿ ಹಲವಾರು ವರ್ಷಗಳಿಂದ ನೆನೆಗುದಿಯಲ್ಲಿರುವ ಭೂಸ್ವಾಧೀನ ಪ್ರಕರಣಗಳ ಜಿಲ್ಲಾವಾರು ವಿವರ:

| ಕ್ರಮ ಸಂಖ್ಯೆ | ಜಿಲ್ಲೆಗಳು | ವಿವರ |
|---|---|---|
| 1 | ಬೆಂಗಳೂರು (ನ) | 03 |
| 2 | ಬೆಂಗಳೂರು (ಗ್ರಾ) | ಯಾವುದೇ ಪ್ರಕರಣ ಇಲ್ಲ |
| 3 | ರಾಮನಗರ | ಯಾವುದೇ ಪ್ರಕರಣ ಇಲ್ಲ |
| 4 | ಕೋಲಾರ | ಯಾವುದೇ ಪ್ರಕರಣ ಇಲ್ಲ |
| 5 | ಚಿಕ್ಕಬಳ್ಳಾಪುರ | ಯಾವುದೇ ಪ್ರಕರಣ ಇಲ್ಲ |
| 6 | ತುಮಕೂರು | 03 |
| 7 | ಚಿತ್ರದುರ್ಗ | ಯಾವುದೇ ಪ್ರಕರಣ ಇಲ್ಲ |
| 8 | ದಾವಣಗೆರೆ | ಯಾವುದೇ ಪ್ರಕರಣ ಇಲ್ಲ |
| 9 | ಶಿವಮೊಗ್ಗ | ಯಾವುದೇ ಪ್ರಕರಣ ಇಲ್ಲ |
| 10 | ಮೈಸೂರು | ಯಾವುದೇ ಪ್ರಕರಣ ಇಲ್ಲ |
| 11 | ಮಂಡ್ಯ | ಯಾವುದೇ ಪ್ರಕರಣ ಇಲ್ಲ |
| 12 | ಚಾಮರಾಜನಗರ | ಯಾವುದೇ ಪ್ರಕರಣ ಇಲ್ಲ |
| 13 | ಹಾಸನ | ಯಾವುದೇ ಪ್ರಕರಣ ಇಲ್ಲ |
| 14 | ಕೊಡಗು | ಯಾವುದೇ ಪ್ರಕರಣ ಇಲ್ಲ |
| 15 | ಚಿಕ್ಕಮಗಳೂರು | ಯಾವುದೇ ಪ್ರಕರಣ ಇಲ್ಲ |
| 16 | ದಕ್ಷಿಣ ಕನ್ನಡ | ಯಾವುದೇ ಪ್ರಕರಣ ಇಲ್ಲ |
| 17 | ಉಡುಪಿ | ಯಾವುದೇ ಪ್ರಕರಣ ಇಲ್ಲ |
| 18 | ಬೆಳಗಾವಿ | ಯಾವುದೇ ಪ್ರಕರಣ ಇಲ್ಲ |
| 19 | ಬಾಗಲಕೋಟೆ | ಯಾವುದೇ ಪ್ರಕರಣ ಇಲ್ಲ |
| 20 | ವಿಜಯಪುರ | ಯಾವುದೇ ಪ್ರಕರಣ ಇಲ್ಲ |
| 21 | ಧಾರವಾಡ | 02 |
| 22 | ಗದಗ | 32 |
| 23 | ಹಾವೇರಿ | 51 |
| 24 | ಉತ್ತರಕನ್ನಡ | ಯಾವುದೇ ಪ್ರಕರಣ ಇಲ್ಲ |
| 25 | ಕಲಬುರಗಿ | ಯಾವುದೇ ಪ್ರಕರಣ ಇಲ್ಲ |
| 26 | ಬಳ್ಳಾರಿ | ಯಾವುದೇ ಪ್ರಕರಣ ಇಲ್ಲ |
| 27 | ಕೊಪ್ಪಳ | ಯಾವುದೇ ಪ್ರಕರಣ ಇಲ್ಲ |
| 28 | ರಾಯಚೂರು | ಯಾವುದೇ ಪ್ರಕರಣ ಇಲ್ಲ |
| 29 | ಯಾದಗಿರಿ | ಯಾವುದೇ ಪ್ರಕರಣ ಇಲ್ಲ |
| 30 | ಬೀದರ್ | ಯಾವುದೇ ಪ್ರಕರಣ ಇಲ್ಲ |

(ಆರ್. ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಸ್ವಾಧೀನ-2)